ಆದ್ದರಿಂದ, ಆ ಕಾಲ ಹೊರಟುಹೋಯಿತು. ಹಿಂದೆ ಯಾರು ಏನು ಮಾಡಿದರೂ ಕೂಡ ನಡೆಯೋದು. ಈಗ ಹೊರಟುಹೋಗಿದೆ. ತಮ್ಮ ಅಧಿಕಾರದ ಕಾಲದಲ್ಲಿ ಎಷ್ಟು ಸ್ಕ್ಯಾಂದಲ್ಸ್ ಬರಲಿಲ್ಲ? ಆಗ ಎಷ್ಟು ಜನ ಮನೆಗೆ ಹೋಗಬೇಕಾಗಿತ್ತು ಎಂಬುದನ್ನು ಆಲೋಚನೆ ಮಾಡಿ ಕೊಳ್ಳಿ. ಪಾಪ ರಾಮಕೃಷ್ಣ ಹೆಗಡೆಯವರು ಒಬ್ಬರೇ ಹೋದರು ಒಮ್ಮೆ. ಒಮ್ಮೆ ರಿಸೈನ್ ಮಾಡಿದರು, ಪುನಃ ಬಂದರು. ಸನ್ಮಾನ್ಯ ದೇವೇಗೌಡರ ಮೇಲೆ ಎಷ್ಟು ಬರಲಿಲ್ಲ? ಎಲ್ಲಾ ಬಂದಿದೆ. ಆದ್ದರಿಂದ ಈ ಕಡೆಗೆ ತಾವು ಪಾಠ ಹೇಳಲಿಕ್ಕೆ ಹೋಗಬೇಡಿ. ನಾವು ಏನು ಇದ್ದರೂ ಕೂಡ ಬ್ಲಾಕ್ ಆಂಡ್ ವೈಟ್. ಆದ್ದರಿಂದ ತಾವು ನಮಗೆ ಹೇಳಲು ಹೋಗಬೇಡಿ.

ಶ್ರೀ ಸಿ. ಬೈರೇಗೌಡ :- ಇಲ್ಲಿ ಸರ್ಕಾರದ ಕಾರ್ಯದರ್ಶಿಗಳೇ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.ಇದರ ಬಗ್ಗೆ ಹೇಳಿ. ಯಾವುದಕ್ಕೆ ಯಾವುದೋ ಉತ್ತರ ಕೊಡಲು ಹೋಗಬೇಡಿ.

ಉಪಾಧ್ಯಕ್ಷರು :- ಇಲ್ಲಿಗೆ ಈ ಚರ್ಚೆ ಮುಕ್ತಾಯವಾಯಿತು.

Reg : Strike by the non teaching college of College

ಶ್ರೀ ಆರ್ ದೇಶಪಾಂಡೆ :- (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರು ಉನ್ನತ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ. ನಾನು ಬೆಳಗ್ಗೆ ಒಂದುವಿಚಾರ ಹೇಳಿದ್ದೆ. The non-teaching staff of colleges are on strike. I have raised this in the morning. There is not much financial burden. Why not you call them for a discussion which will solve the problem?

Sri S.M.Yahya :- I am happy to say that we have solved their problem. Yesterday they have called off the strike.

ಉಪಾಧ್ಯಕ್ಷರು :- ಈಗ ಶಾಸನಾತ್ಮಕ ನಿರ್ಣಯಗಳು.

ಈಗ ಶಾಸನಾತ್ಮಕ ನಿರ್ಣಯಗಳು

1. **ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1993-94ನೇ ಸಾಲಿಗೆ ಹಾಗೂ 1994-95ನೇ ಸಾಲಿನಲ್ಲಿ ಸಾಲವನ್ನು ಪಡೆದುಕೊಳ್ಳಲು ಗರಿಷ್ಠ ಮೊತ್ತವನ್ನು ಹೆಚ್ಚಿಸುವ ಬಗ್ಗೆ (ಕೇಂದ್ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 1948 ರ ಕೆಳಗೆ) ನಿರ್ಣಯ.**

ಶ್ರೀ ವಿ. ಮುನಿಯಪ್ಪ :(ಇಂಧನ ಖಾತೆ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೇ,. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1993-94ನೇ ಸಾಲಿಗೆ ಹಾಗೂ 1994-95ನೇ ಸಾಲಿನಲ್ಲಿ ಸಾಲವನ್ನು ಪಡೆದುಕೊಳ್ಳಲು ಗರಿಷ್ಠ ಮೊತ್ತವನ್ನು ಹೆಚ್ಚಿಸುವ ಬಗ್ಗೆ (ಕೇಂದ್ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 1948ರ ಕೆಳಗೆ) ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ ''ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1993-94ನೇ ಸಾಲಿಗೆ ಹಾಗೂ 1994-95ನೇ ಸಾಲಿನಲ್ಲಿ ಸಾಲವನ್ನು ಪಡೆದುಕೊಳ್ಳಲು ಗರಿಷ್ಠ ಮೊತ್ತವನ್ನು ಹೆಚ್ಚಿಸುವ ಬಗ್ಗೆ (ಕೇಂದ್ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 1948 ಕೆಳಗೆ) ನಿರ್ಣಯವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು :-

ಶ್ರೀ ವಿ.ಮುನಿಯಪ್ಪ : (ಇಂಧನ ಖಾತೆ ರಾಜ್ಯ ಸಚೀವರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1993-94ನೇ ಸಾಲಿಗೆ ಹಾಗೂ 1994-95ನೇ ಸಾಲಿನಲ್ಲಿ ಸಾಲವನ್ನು ಪಡೆದುಕೊಳ್ಳಲು ಗರಿಷ್ಠ ಮೊತ್ತವನ್ನು ಹೆಚ್ಚಿಸುವ ಬಗ್ಗೆ (ಕೇಂದ್ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 1948ರ ಕೆಳಗೆ) ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರೆ :- ನಿರ್ಣಯವನ್ನು ಮಂಡಿಸಲಾಗಿದೆ.

2. ಹತ್ತಿ ಸಾಗಾಣಿಕೆ ಅಧಿನಿಯಮ 1923 (1923 ರ ಕೇಂದ್ರ ಅಧಿನಿಯಮ ಸಂಖ್ಯೆ : 3) ಇದರಡಿಯಲ್ಲಿ ರಾಜ್ಯ ಸರ್ಕಾರವು ಹೊರಡಿಸಿರುವ ಅಧಿಸೂಚನೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಹಾಗೂ ಹತ್ತಿ ಸಾಗಾಣಿಕೆ (ಕರ್ನಾಟಕ) ನಿಯಮಗಳು 1963 ನ್ನು ನಿರಸನಗೊಳಿಸುವ ಬಗ್ಗೆ ನಿರ್ಣಯ.

ಶ್ರೀ ಹೆಚ್.ಎಂ. ರೇವಣ್ಣ :- (ಕೃಷಿ ಸಚಿವರು)

ಮಾನ್ಯ ಉಪಾಧ್ಯಕ್ಷರೇ, ''ಹತ್ತಿ ಸಾಗಾಣಿಕೆ ಅಧಿನಿಯಮ 1923 (1923ರ ಕೇಂದ್ರ ಅಧಿನಿಯಮ ಸಂಖ್ಯೆ :3) ಇದರಡಿಯಲ್ಲಿ ರಾಜ್ಯ ಸರ್ಕಾರವು ಹೊರಡಿಸಿರುವ ಅಧಿಸೂಚನೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಹಾಗೂ ಹತ್ತಿ ಸಾಗಾಣಿಕೆ (ಕರ್ನಾಟಕ) ನಿಯಮಗಳು 1963ನ್ನು ನಿರಸನಗೊಳಿಸುವ ಬಗ್ಗೆ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.''

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ ''ಹತ್ತಿ ಸಾಗಾಣಿಕೆ ಅಧಿನಿಯಮ 1923 (1923ರ ಕೇಂದ್ರ ಅಧಿನಿಯಮ ಸಂಖ್ಯೆ :3) ಇದರಡಿಯಲ್ಲಿ ರಾಜ್ಯ ಸರ್ಕಾರವು ಹೊರಡಿಸಿರುವ ಅಧಿಸೂಚನೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಹಾಗೂ ಹತ್ತಿ ಸಾಗಾಣಿಕೆ (ಕರ್ನಾಟಕ) ನಿಯಮಗಳು 1963ನ್ನು ನಿರಸನಗೊಳಿಸುವ ಬಗ್ಗೆ ನಿರ್ಣಯವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು